# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 98/15-16.**

**ದಿನಾಂಕ : 25-10-2016.**

ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಶಿವರಾಮ ಭಟ್ ಬಿನ್.ದಿ॥ ಭೀಮ ಭಟ್, | -ಮತ್ತು- | ತಹಶೀಲ್ದಾರರು, |
| ಹತ್ತೊಕ್ಕಲು ಮನೆ, | | ಬೆಳ್ತಂಗಡಿ ತಾಲೂಕು ದ.ಕ. |
| ಇಳಂತಿಲ ಗ್ರಾಮ ಮತ್ತು ಅಂಚೆ, | | |
| ಬೆಳ್ತಂಗಡಿ ತಾಲೂಕು ದ.ಕ. | | |
| ( ನ್ಯಾಯವಾದಿ ಶ್ರೀ ಎಮ್ ಈಶ್ವರ ಭಟ್ ) | | |

**---**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಬೆಳ್ತಂಗಡಿ ತಾಲೂಕು ಇಳಂತಿಲ ಗ್ರಾಮದ ಎಮ್.ಆರ್ H 162/11-12 ದಿನಾಂಕ : 07-07-2012 ರಂತೆ ತಹಶೀಲ್ದಾರರು ನೀಡಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಇಳಂತಿಲ ಗ್ರಾಮದ ಸ.ನಂ. 131/1 ರ ಪೈಕಿ ವಿಸ್ತೀರ್ಣ 0.31 ಎಕ್ರೆ, 131/2 ರ ಪೈಕಿ ವಿಸ್ತೀರ್ಣ 1.54 ಎಕ್ರೆ, 134/3ಸಿ ರ ಪೈಕಿ ವಿಸ್ತೀರ್ಣ 1.81 ಎಕ್ರೆ, 134/5 ರ ಪೈಕಿ ವಿಸ್ತೀರ್ಣ 0.35 ಎಕ್ರೆ, ಜಮೀನು ನೋಂದಾಯಿತ ಹಕ್ಕು ಖುಲಾಸು ಪತ್ರ ದಸ್ತಾವೇಜು ನಂಬ್ರ 3902/11-12 ರಂತೆ ಭೀಮ ಭಟ್ ಮತ್ತು ಅವರ ಮಕ್ಕಳಾದ ಶಂಕರ ಭಟ್ ಮತ್ತು ಶಿವರಾಮ ಭಟ್ ( ಮೇಲ್ಮನವಿದಾರರು) ರ ಹೆಸರಿನಲ್ಲಿ ಪಹಣಿಯಲ್ಲಿ ಎಮ್.ಆರ್ 108/11-12 ದಿನಾಂಕ : 06-02-2012 ರಂತೆ ದಾಖಲಾಗಿರುತ್ತದೆ. ಭೀಮ ಭಟ್ ರವರ ಮರಣಾ ನಂತರ ಈ ನೋಂದಾಯಿತ ವೀಲುನಾಮೆಯಂತೆ ಶೆಡ್ಯೂಲ್ ಆಸ್ತಿಯಲ್ಲಿ ಅವರಿಗಿದ್ದ 28/141 ಅಂಶದ ಹಕ್ಕನ್ನು ಅವರ ಒಬ್ಬ ಮಗನಾದ ಶಂಕರ ಭಟ್ ಎಂಬುವವರಿಗೆ ನೀಡಿರುತ್ತಾರೆ. ಸದ್ರಿ ಮ್ಯುಟೇಶನ್ ನಂತೆ ಭೀಮ ಭಟ್ ಹೆಸರನ್ನು ಖಾತೆಯಿಂದ ಲೋಪಪಡಿಸಿ ಅವರ ಹಕ್ಕನ್ನು ಶಂಕರ ಭಟ್ ಹೆಸರಿಗೆ ನಮೂದಿಸಬೇಕಿತ್ತು, ಆದರೆ 162/11-12 ದಿನಾಂಕ : 07-07-2012 ರ ಮ್ಯುಟೇಶನ್ ಪೂರ್ವದಲ್ಲಿದ್ದ ಮೇಲ್ಮನವಿದಾರರಾದ ಶಿವರಾಮ ಭಟ್ ರವರ ಹೆಸರನ್ನು ತೆಗೆದು ಹಾಕಿ, ಶಂಕರ ಭಟ್ ರವರ ಹೆಸರಿನಲ್ಲಿ ಮಾತ್ರ ಪಹಣಿ ನೀಡಿರುವುದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 15-09-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ : 14-06-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಪೂರ್ವದ ಎಮ್.ಆರ್ 108/11-12 ದಿನಾಂಕ : 06-02-2012 ರಂತೆ ಭೀಮ ಭಟ್ ಮತ್ತು ಮಕ್ಕಳಾದ ಶಂಕರ ಭಟ್ ಮತ್ತು ಶಿವರಾಮ ಭಟ್ ಹೆಸರು ಪಹಣಿ ದಾಖಲಾಗಿದ್ದು, ಭೀಮ ಭಟ್ಟರ ನಂತರ ಅವರು ವೀಲುನಾಮೆಯಂತೆ ಅವರ ಹಕ್ಕಿನ 28/141 ಅಂಶವನ್ನು ಶಂಕರರವರಿಗೆ ನೀಡಿದ್ದು, ನಂತರದ ಎಮ್.ಆರ್ H 162/2011-12 ದಿನಾಂಕ : 07-07-2012 ರಲ್ಲಿ ಮ್ಯುಟೇಶನ್ ಪ್ರಕ್ರಿಯೆ ವೇಳೆ ಭೀಮ ಭಟ್ಟರ ಹಕ್ಕನ್ನು ಮಾತ್ರ ಶಂಕರ ಭಟ್ ರವರ ಹಕ್ಕಿಗೆ ಸೇರಿಸಬೇಕಿದ್ದು, ಮೇಲ್ಮನವಿದಾರರ ಹಕ್ಕನ್ನು ತೆಗೆದುಹಾಕಲಾಗಿರುತ್ತದೆ. ಆದ್ದರಿಂದ ಸದ್ರಿ ಎಮ್.ಆರ್ H 162/11-12 ದಿನಾಂಕ : 07-07-2012 ನ್ನು ರದ್ದುಪಡಿಸಿ ಪೂರ್ವದ ಎಮ್ ಆರ್ 108/11-12 ರಲ್ಲಿದ್ದ ಮೇಲ್ಮನವಿದಾರರ ಹೆಸರನ್ನು ದಾಖಲು ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಬೆಳ್ತಂಗಡಿ ತಾಲೂಕು ಇಳಂತಿಲ ಗ್ರಾಮದ ಎಮ್.ಆರ್ H 162/11-12 ದಿನಾಂಕ : 07-07-2012 ರ ಆದೇಶ ರದ್ದುಪಡಿಸಿ, ಪ್ರಶ್ನಿತ ಮ್ಯುಟೇಶನ್ ನ ಮೊದಲು ಪಹಣಿಯಲ್ಲಿದ್ದ ಮೇಲ್ಮನವಿದಾರ ಶಿವರಾಮ ಭಟ್ ಹೆಸರನ್ನು ಮೇಲ್ಮನವಿದಾರರಿಗೆ ಸೇರಿದ ಶೆಡ್ಯೂಲ್ ನಲ್ಲಿ ಕಾಣಿಸಿದ ಸ್ಥಿರಾಸ್ತಿಗಳ ಪಹಣಿಯಲ್ಲಿ ಪುನಃ ಸೇರಿಸಲು ಆದೇಶಿಸಬೇಕಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

**<u>ಆದೇಶ.</u>**

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಾಲೂಕು ಇಳಂತಿಲ ಗ್ರಾಮದ ಎಮ್.ಆರ್ H 162/2011-12 ದಿನಾಂಕ : 07-07-2012 ನೇ ರದ್ದುಪಡಿಸಿ ಆದೇಶಿಸಿದೆ. ಇಳಂತಿಲ ಗ್ರಾಮದ 131/1 ರ ಪೈಕಿ ವಿಸ್ತೀರ್ಣ 0.31 ಎಕ್ರೆ, 131/2 ರ ಪೈಕಿ ವಿಸ್ತೀರ್ಣ 1.54 ಎಕ್ರೆ, 134/3ಸಿ ರ ಪೈಕಿ ವಿಸ್ತೀರ್ಣ 1.81 ಎಕ್ರೆ, 134/5 ರ ಪೈಕಿ ವಿಸ್ತೀರ್ಣ 0.35 ಎಕ್ರೆಗಳ ಖಾತೆಯಿಂದ ಮೃತ ಭೀಮಭಟ್ ಹೆಸರನ್ನು ಮಾತ್ರ ಲೋಪಪಡಿಸಿ, ಶಿವರಾಮ ಭಟ್ ಹೆಸರನ್ನು ಸೇರಿಸಲು ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 28-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ. ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಎಮ್ ಈಶ್ವರ ಭಟ್ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.